ಕೈಯಲ್ಲಿ ನಮ್ಮ ಪಕ್ಷದ ಹಿರಿಯ ರಾಜಕಾರಣಿಗಳ, ಮಠಾಧೀಶರುಗಳ, ಇತರ ಸೀನಿಯರ್ ಅಧಿಕಾರಿಗಳ ಮುಖಾಂತರ ಲಾಬಿ ಮಾಡಿಕೊಂಡು ಬಂದ ಎಂಟು ಶಿಕ್ಷಕರ ಹೆಸರುಗಳಿವೆ. ಇನ್ನೂ ಮುಖ್ಯಮಂತ್ರಿಗಳು ಯಾರ ಹೆಸರೂ ಹೇಳಿಲ್ಲ. ಎರಡು ಅವರಿಗೆ ಬಿಡೋಣ. ಉಳಿದ ಎರಡು ಆಯ್ಕೆಗಳಲ್ಲಿ ಒಂದು ನಿಮಗೆ, ಒಂದು ನನಗೆ' ಶಿಕ್ಷಣ ಮಂತ್ರಿಯವರು ಕರೆದು ಹೇಳಿದಾಗ ನಕ್ಕರು ದಾಮೋದರ್.

'ನಿಮಗೆ ನಗು ಬರುತ್ತೆ. ನನ್ನ ಮೇಲಿನ ಪ್ರೆಶರ್ ಎಷ್ಟಿದೆ ಗೊತ್ತಾ? ಇದ್ದದ್ದರಲ್ಲಿ ಮುಖ್ಯಮಂತ್ರಿಗಳೇ ವಾಸಿ. ನಾನು ಎರಡು ಹೆಸರು ಹೇಳ್ತೇನೆ... ಮಿಕ್ಕವರೆಲ್ಲರ ಹೆಸರನ್ನು ಆಯ್ಕೆ ಸಮಿತಿಯ ಸಭೆಯಲ್ಲಿ ಮಂಜೂರು ಮಾಡಿಸಿ... ಇನ್ನು ಇದರಲ್ಲಿ ಅಪಸ್ವರ ಬೇಡ ಅಂದಿದ್ದಾರೆ. ಹಾಗೇ ಆಯ್ಕೆ ಸಮಿತಿ ಮೀಟಿಂಗೂ ಕರೆಸಿ. ಈಗಾಗಲೇ ಬಂದಿರುವ ಎಂಟು ಶಿಕ್ಷಕರಿಗೂ ಆಯ್ಕೆ ಸಮಿತಿಯಲ್ಲಿ ನಿಮ್ಮ ಹೆಸರಿಗೆ ಅನುಮೋದನೆ ಸಿಗುವಂತೆ ನೋಡಿಕೊಳ್ಳಿ ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ಆಯ್ಕೆ ಪ್ರಕ್ರಿಯೆ ಬರುವ ವಾರದಲ್ಲೇ ಮುಗಿಯ ಬೇಕು' ಅಂದಿದ್ದರು.

'ಸರಿ ಸಾರ್' ಎನ್ನುತ್ತ ತಲೆಯಾಡಿಸಿದ್ದರು ದಾಮೋದರ್.

ತಾನು ರೆಕಮಂಡ್ ಮಾಡಿ ಒಬ್ಬ ಶಿಕ್ಷಕರಿಗೆ ಪ್ರಶಸ್ತಿ ಕೊಡಿಸಬಹುದು ಎಂಬುದು ಮನಸ್ಸಿಗೆ ಹೋಗುತ್ತಲೇ ಹಲವಾರು ಶಿಕ್ಷಕರ ಮುಖಮುದ್ರೆಗಳು ದಾಮೋದರ್ ಅವರ ಚಿತ್ತದಲ್ಲಿ ಹಾದು ಹೋದವು. ಅವುಗಳಲ್ಲಿ ಮುಂಚೂಣಿಯಲ್ಲಿದ್ದ ಮುಖ ಗಣೇಶ ಮಾಸ್ತರರದ್ದು. ಟ್ಯೂಶನ್ ಮುಗಿದಾಗ ಅಪ್ಪ ಬಾರದೇ ಇದ್ದರೆ ಕೆಂಪಾಗುತ್ತಿದ್ದ ಅವರ ಮುಖ ಮರೆಯಲು ಸಾಧ್ಯವೇ!... ತನ್ನ ಎದುರೇ ಅಪ್ಪನನ್ನು ಬೈಯುತ್ತಿದ್ದ ಅವರೆದುರು ಹೋಗಿ ನಿಮಗೆ ಪ್ರಶಸ್ತಿ ಕೊಡಿಸಬಲ್ಲೆ ಎಂದು ಹೇಳಿ ತನ್ನ ಇವತ್ತಿನ ಸ್ಥಾನಮಾನ ತೋರಿಸಿಕೊಡಬೇಕು ಎಂಬ ಆಸೆಯಾಯಿತು. ಸಿಡುಕು ಮುಖ ಮಾಡಿಕೊಂಡು ಬೈಯುತ್ತಲೇಯಾದರೂ ಪಾಠ ಮಾಡಿ ತನ್ನ ಏಳಿಗೆಗೆ ಕಾರಣಕರ್ತ ಆತ. ಅವರಿಗೆ ಪ್ರಶಸ್ತಿ ಕೊಡಿಸಬೇಕು, ಆದರೆ ಸುಲಭದಲ್ಲಿ ಅಲ್ಲ, ಮೊದಲು ಬಾಯಲ್ಲಿ ನೀರೂರಿಸಿ, ಆಮೇಲೆ ಸ್ವಲ್ಪ ಕುಣಿಸಿ, ಸತಾಯಿಸಿ! ಅದರೊಂದಿಗೇ ಮುಂದೆ ಶಾಲೆಯಲ್ಲಿ ಸನ್ಮಾನ ಸಮಾರಂಭ ಏರ್ಪಡಿಸಿ ಊರವರಿಗೂ ತನ್ನ ಸ್ಥಾನಮಾನ ತೋರ್ಪಡಿಸಿಕೊಳ್ಳುವ ತನ್ನ ಆಲೋಚನೆಗೆ ಮನದಲ್ಲೇ ನಕ್ಕು ಜೀಪು ಹತ್ತಿ ಕುಳಿತರು ದಾಮೋದರ್.

★★★

'ಸರ್ ನನ್ನ ಹೆಸರು ದಾಮೋದರ. ನೀವು ಶ್ರೀಮಂತ ಮಕ್ಕಳಿಗೆ ಎಸ್ಸೆಸ್ಸೆಲ್ಸಿ ಟ್ಯೂಶನ್ ಕೊಡುತ್ತಿದ್ದಾಗ ಕೆಳಜಾತಿಯ ಬಡ ಹುಡುಗರನ್ನೂ ಫೀಸು ತೆಗೆದುಕೊಳ್ಳದೇ ಅಲ್ಲಿ ಕೂರಿಸಿಕೊಳ್ಳುತ್ತಿದ್ದೀರಲ್ಲ, ಹಾಗೆ ಕುಳಿತು ನಿಮ್ಮ ಪಾಠ ಕೇಳಿಸಿಕೊಂಡು ಉತ್ತಮ ಮಾರ್ಕ್ ಗಳಿಸಿ ಉತ್ತೀರ್ಣರಾದವರಲ್ಲಿ ನಾನೂ ಒಬ್ಬ. ನನ್ನಂತಹ ಎಷ್ಟೋ ಮಕ್ಕಳನ್ನು ಪ್ರತಿವರ್ಷ ಟ್ಯೂಶನ್ನಿಗೆ ಕೂರಿಸಿಕೊಂಡ ಹೆಸರಿನಿಂದ ನಿಮಗೆ ನನ್ನನ್ನು ಗುರ್ತಿಸಲು ಸಾಧ್ಯವಿಲ್ಲ. ಆದರೆ ತೀರ ಸುಲಭವಾಗಿ ಗುರ್ತಿಸುವ ಮಾರ್ಗವೊಂದಿದೆ. ಟ್ಯೂಶನ್ ಮುಗಿದ ಮೇಲೆ ನನ್ನಪ್ಪ ಬರದೇ ಇದ್ದ ದಿನಗಳಲ್ಲಿ ಅವನನ್ನು ದಾರಿಯುದ್ದಕ್ಕೂ ಶಪಿಸುತ್ತಾ ರಾತ್ರಿ ಕತ್ತಲಲ್ಲಿ ನನ್ನನ್ನು ಮನೆಗೆ ಬಿಟ್ಟು ಬರುತ್ತಿದ್ದವರು. ಈಗ ನೆನಪಾಯಿತಾ?' ಕೇಳಿದರು ದಾಮೋದರ್.

